ಅಧ್ಯಕ್ಷರು : ಸಭೆ ಸದನವನ್ನು ಈಗ 1 ಗಂಟೆ ಕಾಲ ಮುಂದುಡುತ್ತೇನೆ. ಸದನವು ಮತ್ತೆ 2 ಗಂಟೆಗೆ ಸೇರುವುದು.

ಸದನವು ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಸೇರಿತು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರು ಶ್ರೀ ಎ.ಎಸ್. ಕೌಜಲಗಿಯವರು ವಹಿಸಿದ್ದರು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ ಇದು ಬೆಳಿಗ್ಗೆ ಲೋಕಸೇವಾ ಆಯೋಗದ ಬಗ್ಗೆ ಚರ್ಚೆ ನಡೆಯುವಾಗ ಶ್ರೀ ಯಡಿಯೂರಪ್ಪ ಮತ್ತು ಚಂದ್ರೇಗೌಡರ ಮಧ್ಯೆ ಕೆಲವು ಮಾತುಗಳು ನಡೆದಿವೆ. ಆ ಬಗ್ಗೆ ನಾವು ತಮ್ಮ ಕೊಠಡಿಯಲ್ಲಿ ಕುಳಿತು ಒಳ್ಳೆಯ ವಾತಾವರಣದಲ್ಲಿ ಸಭೆ ನಡೆಸಬೇಕೆಂದು ತಮ್ಮ ಅಪ್ಪಣೆ ಪ್ರಕಾರ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು ಕೆಲವು ಮಾತು ಆಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ಬಹಳ ಪ್ರಮುಖವಾದಂತಹ ಲೋಕಸೇವಾ ಆಯೋಗದ ಬಗ್ಗೆ ಚರ್ಚೆ ನಡೆದಿದ್ದಾಗ ಕೆಲವು ಘಟನೆಗಳು ನಡೆದವು. ನನಗೆ ಚಂದ್ರೇಗೌಡರ ಬಗ್ಗೆ ಗೌರವ ಇದೆ, ಅವರಿಗೆ ನೋವು ಮಾಡಬೇಕೆಂಬ ಅಪೇಕ್ಷೆ ಎನೂ ಇರಲಿಲ್ಲ. ನಾನೇನು ಚಂದ್ರೇಗೌಡರ ಬಗ್ಗೆ ಮಾತನಾಡಿದ್ದೇನೆ ಅದನ್ನೆಲ್ಲಾ ತಾವು ಕಡತದಿಂದ ತೆಗೆದುಹಾಕಿದ್ದೀರಿ. ನಾನೂ ಸಹ ವಾಪಸ್ ಹಿಂತೆಗೆದುಕೊಳ್ಳುತ್ತೇನೆ. ಮತ್ತು ಅವರಿಗೆ ಏನು ನೋವಾಗಿದೆ ಅದರ ಬಗ್ಗೆ ಈ ಸಂದರ್ಭದಲ್ಲಿ ಖೇದ ವ್ಯಕ್ತ ಪಡಿಸುತ್ತೇನೆ.

ಗಮನ ಸೆಳೆಯುವ ಸೂಚನೆ

ವಿಷಯ : ಚಾಮರಾಜನಗರ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿಯ ಅಭಾವದಿಂದ ಕೋಟ್ಯಾಂತರ ರೂಪಾಯಿಗಳ ಬೆಳೆ ನಷ್ಟ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಚಾಮರಾಜನಗರ ತಾಲ್ಲೂಕಿನಲ್ಲಿ ನಿರಂತರವಾಗಿ ವಿದ್ಯುಚ್ಛಕ್ತಿ ಅಭಾವ ತಲೆದೋರಿ ಕೋಟ್ಯಾಂತರ ರೂಪಾಯಿಗಳ ಬೆಳೆ ನಷ್ಟವಾಗುತ್ತಿರುವ ಪರಿಸ್ಥಿತಿ ಒದಗಿರುವ ಬಗ್ಗೆ ಮಾನ್ಯ ಇಂಧನ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.

ಚಾಮರಾಜನಗರ ತಾಲ್ಲೂಕಿನಲ್ಲಿ ಉದ್ಭವಿಸಿರುವ ವಿದ್ಯುತ್ ಸಮಸ್ಯೆಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಮನಗಂಡಿದೆ. ಇದಕ್ಕಾಗಿ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ.

ಚಾಮರಾಜ ನಗರದ ದೊಡ್ಡರಾಯ ಪೇಟೆಯಲ್ಲಿರುವ 66-11 ಕೆ.ವಿ. ವಿದ್ಯುತ್ ಸಬ್‌ಸ್ಟೇಷನ್‌ಗೆ ಮೈಸೂರು-ನಂಜನಗೂಡು -ಚಾಮರಾಜನಗರ 66 ಕೆ.ವಿ. ವಿದ್ಯುತ್ ಪ್ರಸರಣ ಮಾರ್ಗದಿಂದ ವಿದ್ಯುತ್ ಸರಬರಾಜಾಗುತ್ತಿದ್ದು ಮೈಸೂರಿನಿಂದ ನಂಜನಗೂಡಿಗಿರುವ 66 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗ ಹೆಚ್ಚು ಹೊರೆಯನ್ನು

ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಭಾಗವನ್ನು ಬಲಪಡಿಸಬೇಕಾಗಿದೆ. ಈ ಕಾರಣದಿಂದಾಗಿ, ಚಾಮರಾಜ ನಗರದ ದೊಡ್ಡರಾಯಪೇಟೆಯಲ್ಲಿರುವ 66-11 ಕೆ ವಿದ್ಯುತ್ ಸಬ್‌ಸ್ಟೇಷನ್‌ಗೆ ಪರ್ಯಾಯವಾಗಿ ಕೊಳ್ಳೆಗಾಲದಿಂದ 66 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗವನ್ನು ಸಂತೇಮರಹಳ್ಳಿ ಮೂಲಕ ನಿರ್ಮಾಣ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದ್ದು, ಜುಲೈ 95ರ ಅಂತ್ಯದ ವೇಳೆಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಗುರಿ ಹಾಕಿ ಕೊಂಡಿದೆ.

ಈ ತಾಲ್ಲೂಕಿನ ಹೊನ್ನಹಳ್ಳಿಯಲ್ಲಿರುವ 33-11 ಕೆವಿ ವಿದ್ಯುತ್ ಸಬ್ ಸ್ಟೇಷನ್ ಹೆಚ್ಚು ಗೋಡೆ ಆಗುತ್ತಿದೆ. ಇದರ ನಿರ್ವಹಣೆಗಾಗಿ ಸದರೀ ಸಬ್ ಸ್ಟೇಷನ್‌ನಲ್ಲಿ ಇನ್ನೊಂದು 5 ಎಂವಿಎ ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾಮರನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ. ಸೆಪ್ಟಂಬರ್ 94ರ ಅಂತ್ಯದ ವೇಳೆಗೆ ಈ ಟ್ರಾನ್ಸ್ ಫಾರ್ಮರನ್ನು ಚಾಲನೆಗೊಳಿಸಲಾಗುವುದು.

ಈ ತಾಲ್ಲೂಕಿನ ಗ್ರಾಮದಲ್ಲಿ ಒಂದು 33-11 ಕೆವಿ ವಿದ್ಯುತ್ ಸಬ್ ಸ್ಟೇಷನ್‌ನನ್ನು ಸುಮಾರು 66 ಲಕ್ಷ ರೂ. ವೆಚ್ಚದಲ್ಲಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ದೊಡ್ಡರಾಯನಪೇಟೆಯಿಂದ ಹಂಪೆಗೆ ಸುಮಾರು 15 ಕಿ.ಮಿ ಉದ್ದದ 33 ಕಿ.ಮಿ. ವಿದ್ಯುತ್ ಪ್ರಸರಣಾ ಮಾರ್ಗವನ್ನು ನಿರ್ಮಾಣ ಮಾಡಲು ಜನವರಿ 95ರ ಅಂತ್ಯದ ವೇಳೆಗೆ ವಿದ್ಯುತ್ ಸಬ್ ಸ್ಟೇಷನ್ , ಮತ್ತು ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಗುರಿ ನಿಗಧಿ ಪಡಿಸಲಾಗಿದೆ.

ಈ ತಾಲ್ಲೂಕಿನ ಕಂದಕವಾಡಿ ಗ್ರಾಮದಲ್ಲಿ ಒಂದು 33 : 11 ಕೆವಿ ವಿದ್ಯುತ್ ಸಬ್-ಸ್ಟೇಷನನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಈ ಕಾರ್ಯಕ್ಕೆ ತಗಲುವ ಅಂದಾಜು ಪಟ್ಟಿ ಸುಮಾರು 59.6 ರೂ. ಈ ಉದ್ದೇಶದ ವಿದ್ಯುತ್ ಸಬ್-ಸ್ಟೇಷನ್‌ನಲ್ಲಿ 5 ಎಂವಿಎ ಸಾಮರ್ಥ್ಯದ ಒಂದು ಪವರ್ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಾಗುವುದು. ದೊಡ್ಡರಾಯಪೇಟೆಯಿಂದ ನಂಜನಗೂಡಿಗೆ ಸುಮಾರು 100 ಕಿ.ಮಿ ಉದ್ದದ 33 ಕೆವಿ ಪ್ರಸರಣಾ ಮಾರ್ಗವನ್ನು ನಿರ್ಮಾಣ ಮಾಡಲಾಗುವುದು. ಅಲ್ಲದೇ ಸಂತೇಮರಹಳ್ಳಿಯಲ್ಲಿ ಒಂದು 33 : 11 ಕೆವಿ ವಿದ್ಯುತ್ ಸಬ್-ಸ್ಟೇಷನ್‌ನನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಈ ಕಾರ್ಯಕ್ಕೆ ತಗಲುವ ಅಂದಾಜು ವೆಚ್ಚ 130 ಲಕ್ಷ.ರೂ ದೊಡ್ಡರಾಯಪೇಟೆಯಿಂದ ಸಂತೇಮರಹಳ್ಳಿಗೆ ಸುಮಾರು 13 ಕಿ. ಮಿ., ಉದ್ದದ 66 ಕೆವಿ ವಿದ್ಯುತ್ ಪ್ರಸರಣಾ ಮಾರ್ಗವನ್ನು ನಿರ್ಮಾಣ ಮಾಡಲಾಗುವುದು. ಈ ಎರಡೂ ವಿದ್ಯುತ್ ಉಪಕೇಂದ್ರಗಳ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಕಾರ್ಯವು ಪ್ರಗತಿಯಲ್ಲಿದೆ.

ಚಾಮರಾಜನಗರ ತಾಲ್ಲೂಕಿನಾದ್ಯಂತ 11 ಕೆವಿ ಮತ್ತು 140 ವೋಲ್ಟ್ ವಿದ್ಯುತ್ ವ್ಯವಸ್ಥೆಯಲ್ಲಿ ಹಲವಾರು ಸುಧಾರಣ ಕಾರ್ಯಗಳನ್ನು ನಿರ್ವಹಿಸಲಾಗಿದೆ ಮತ್ತು ಇನ್ನೂ ಕೆಲವು ಕೆಲಸಗಳು ಪ್ರಗತಿಯಲ್ಲಿದೆ.

ಶ್ರೀ ವಾಟಾಳ್ ನಾಗರಾಜ್ : ಇಷ್ಟೆಲ್ಲಾ ಅದರೂ ತಾಲ್ಲೂಕು ಪ್ರಗತಿಯಲ್ಲಿದೆ ಎಂದು ಹೇಳಿದ್ದೀರಿ. ಒಂದು ದಿನಕ್ಕೆ 10 ಗಂಟೆಗಳಕಾಲ ಚಾಮರಾಜ ನಗರದಲ್ಲಿ ವಿದ್ಯುಚ್ಛಕ್ತಿ ನಿಲ್ಲುತ್ತದೆ. ಈ ಪರಿಸ್ಥಿತಿಯನ್ನು ಬಗೆಹರಿಸುವುದರಲ್ಲಿ ಸರಿಯಾದ ವ್ಯವಸ್ಥೆ ಆಗಿಲ್ಲ. ಮೈಸೂರು ಕಡೆಯಿಂದ ಚಾಮರಾಜನಗರಕ್ಕೆ ಬರತಕ್ಕ ಲೈನು ಏನಿದೆ ಅದು ಒಂದೇ ಲೈನು ಇರತಕ್ಕದ್ದು. ಯಾವುದೇ ಸಂದರ್ಭದಲ್ಲಿ ಆ ಲೈನು ಕೆಟ್ಟರೆ ಸಂಪೂರ್ಣವಾಗಿ ಇಡೀ ವಿದ್ಯುಚ್ಛಕ್ತಿ ಹೋಗತಕ್ಕಂಥ ವ್ಯವಸ್ಥೆ ಇದೆ. ಅದಕ್ಕೆ ಪರ್ಯಾಯವಾಗಿ ಮತ್ತೊಂದು ಲೈನನ್ನು ಹಾಕತಕ್ಕ ವ್ಯವಸ್ಥೆ ಏನಿದೆ ಎಂಬುದನ್ನು ಸರ್ಕಾರ ತಿಳಿಸಬೇಕು. ಇದರ ಜೊತೆಗೆ ಹರವೆ ಮತ್ತು ಸಂತೇಮಾರನಹಳ್ಳಿ , ಚಂಪಕವಾಡಿಯಲ್ಲಿ ತಾವು ಉಪ ವಿತರಣಾ ಕೇಂದವನ್ನು ಸ್ಥಾಪನೆ ಮಾಡುವುದಕ್ಕೆ ಹೊರಟ್ಟಿದ್ದೀರಿ. ಹರವೆಯಲ್ಲಿ ಈಗಾಗಲೇ ಪ್ರಾರಂಭ ಮಾಡುವುದಕ್ಕೆ ಹೊರಟ್ಟಿದ್ದೀರಿ. ಇದು ಎಷ್ಟು ಎಷ್ಟು ಬೇಗ ಮುಗಿಸುತ್ತೀರಿ ಎನ್ನತಕ್ಕದ್ದು ಒಂದು. ಹೊನ್ನಾಳಿಯಲ್ಲಿ ನೀವು ಐದು ಎಂವಿ ಟ್ರಾನ್ಸ್‌ಫಾರಂನ್ನು ಈಗ ತಾವು ಮೊನ್ನೆ ತಾನೇ ಕಳುಹಿಸಿಕೊಟಿದ್ದೀರಿ. ಕೂಡಲೇ ಇನ್ನು 8-9 ದಿವಸದಲ್ಲಿ ದುರಸ್ತಿ ಕಾರ್ಯ ಮಾಡಲಿಲ್ಲ ಎಂದರೆ ನನ್ನ ಪ್ರಕಾರ ಒಂದೂವರೆ ಎರಡುಕೋಟಿ ರೂಪಾಯಿ ಬೆಳೆ ನಾಶವಾಗತಕ್ಕಂಥ ಪರಿಸ್ಥಿತಿ ಅಲ್ಲಿದೆ. ಅದರ ಬಗ್ಗೆ ತಾವು ಸ್ಪಷ್ಟವಾದ ನಿರ್ಧಾರವನ್ನು ಹೇಳಬೇಕು. ಮತ್ತು ನಮಗೆ ಉಪಕರಣಗಳನ್ನು ಜಾಸ್ತಿ ಕಳುಹಿಸುತ್ತಾ ಇಲ್ಲ. ಈಗ ಕುಡಿಯುವ ನೀರಿನ ಅನೇಕ ಕೊಳವೆ ಬಾವಿಗಳಿಗೆ ವಿದ್ಯುಚ್ಛಕ್ತಿ ಕೊಡುವುದಕ್ಕೆ ಆಗುತ್ತಿಲ್ಲ. ನೀರಾವರಿ ಪಂಪು ಸೆಟ್ಟುಗಳಿಗೆ ನಾವು ವಿದ್ಯುಚ್ಛಕ್ತಿ ಕೊಡುವುದಕ್ಕೆ ಆಗುತ್ತಿಲ್ಲ. ಈ ಪರಿಸ್ಥಿತಿ ಈ ಗಡಿ ಪ್ರದೇಶದಲ್ಲಿ ತೀವ್ರವಾಗಿ ಹೋಗಿದೆ. ಇದರ ಜೊತೆಗೆ ಅಲ್ಲಿ ಜೋರಾಗಿ ರಸ್ತೆ ಮಾಡಿಸತಕ್ಕ ಒಂದು ಪ್ರಯತ್ನ, ಜೋಡಿ ರಸ್ತೆ ಎಂದು ಕರೆಯುತ್ತಿರುವುದರಿಂದ ಈ ಮಧ್ಯೆ ಹಳೆಯ ಕಾಲದ ವಿದ್ಯುಚ್ಛಕ್ತಿ ಲೈನ್ ಏನು ಇದೆ, ಅದನ್ನು ಬದಲಾವಣೆ ಮಾಡಿ ಬೇರೆ ಕಡೆ ಹೊಸದಾಗಿ ಮಾಡಬೇಕೆಂದು ನಾನು ವಿದ್ಯುಚ್ಛಕ್ತಿ ಮಂಡಲಿಯವರಿಗೆ ಹೇಳಿದ್ದೇನೆ. ಈಗಾಗಲೇ ಮಂಡಲಿಯವರು ಒಂದು ಯೋಜನೆಯನ್ನು ತಯಾರು ಮಾಡಿ ಅದನ್ನು ಕೆಳಗಡೆಯಿಂದ ಮೇಲೆ ಮಂಡಳಿಗೆ ಆ ಯೋಜನೆ ಬಂದಿದೆ. ಸರ್ಕಾರವು ಅದಕ್ಕೆ ಕೂಡಲೇ ಒಪ್ಪಿಗೆ ಕೊಡಬೇಕು. ಇವೆಲ್ಲಾ ವಿಚಾರಗಳನ್ನು ತಾವು ಯಾವಾಗ ಮಾಡುತ್ತೀರಿ ಎನ್ನುವುದು ಒಂದು ವಿಚಾರ. ಪ್ರತಿ ದಿನ ಗಂಟೆವಿದ್ಯುಚ್ಛಕ್ತಿ ನಿಲ್ಲುತ್ತದೆ. ಇದನ್ನು ನಿಲ್ಲಿಸುವುದಕ್ಕೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನತಕ್ಕದ್ದನ್ನು ತಾವು ತಿಳಿಸಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಚಾಮರಾಜ-ನಗರದಲ್ಲಿರತಕ್ಕ ಸಮಸ್ಯೆಗೆ ನಾನು ಸಂಪೂರ್ಣವಾಗಿ ಬಹಳ ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. ಅಲ್ಲಿ ಸಮಸ್ಯೆ ಇದೆ. ಆ ಸಮಸ್ಯೆ ಹಿನ್ನೆಲೆಯಲ್ಲಿ ಅನೇಕ ತರವಾದಂತಹ ಅಭಿವೃದ್ಧಿ ಕೆಲಸಕ್ಕಾಗಿ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ಲೈನ್ನನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ಸಮಸ್ಯೆಯನ್ನು ತತ್‌ಕ್ಷಣ ನಿವಾರಿಸುವುದಕ್ಕೆ ಈಗ ಚಾಮರಾಜನಗರದಲ್ಲಿ , ಈಗ ತಾವು ಏನು ಮೈಸೂರಿನಿಂದ ನಂಜನಗೂಡಿಗೆ ಬರತಕ್ಕ ಲೈನ್ ಏನು, ಅದರ ಸಬ್‌ಸ್ಟಿಟ್ಯೂಟಾಗಿ ಇನ್ನೊಂದು ಲೈನ್‌ನ್ನು ಕೊಳ್ಳೇಗಾಲದಿಂದ ಬರತಕ್ಕ ಒಂದು ಹೊಸ ಲೈನನ್ನು ಈಗಾಗಲೇ ತೆಗೆದಿಕೊಂಡಿದ್ದೇನೆ. ಇದು ಸಂತೇ ಮಾರನಹಳ್ಳಿ ಮೂಲಕ ಆಗುತ್ತದೆ. ಅದರ ಮೂಲಕ ನಿರ್ಮಾಣ ಮಾಡಲು ಮಂಡಳಿ

ತೀರ್ಮಾನಿಸಿದೆ. ಹಾಗೂ ಕಾರ್ಯೋನ್ಮುಖಗೊಂಡಿದೆ. ಜುಲೈ 1995ರೊಳಗೆ ಆ ಕೆಲಸ ಪೂರ್ಣಗೊಳ್ಳತಕ್ಕ ಒಂದು ಗುರಿಯನ್ನು ನಾವು ಇಟ್ಟುಕೊಂಡಿದ್ದೇವೆ. ಆಮೇಲೆ ತಾವು ಹರವೆ ಗ್ರಾಮದಲ್ಲಿ ಏನು ಕೇಳಿದ್ದೀರಿ, ಈಗಾಗಲೇ 33 ಕೆವಿ ಸ್ಟೇಷನ್ ಅನ್ನು ಮಂಜೂರು ಮಾಡಿದ್ದೇವೆ. ಆದ್ದರಿಂದ ಬರುವ ಜನವರಿ 1995ಕ್ಕೆ ಮುಗಿಸ ತಕ್ಕಂಥ ಒಂದು ಗುರಿಯನ್ನು ಇಟ್ಟುಕೊಂಡಿದ್ದೇವೆ. ಇವೆಲ್ಲಾ ಆದರೆ ಬಹುಶಃ ನಮಗೆ ಇರತಕ್ಕ ಏನು ವೋಲ್ಟೇಜ್ ಸಮಸ್ಯೆ ಇದೆ, ಅದು ಖಂಡಿತ ಬಗೆ ಹರಿಯುತ್ತದೆ, ಸುಧಾರಿಸುತ್ತದೆ ಎನ್ನತಕ್ಕ ಭರವಸೆಯನ್ನು ಕೊಡುತ್ತೇವೆ. ತಾವು ಏನು ಹೊಸದಾದ ಲೈನ್ ಬದಲಾವಣೆ ಬಗ್ಗೆ ಹೇಳಿದ್ದೀರಿ ನಾವು ಈಗಾಗಲೇ ಅದರ ಬಗ್ಗೆ ಎಸ್ಟಿಮೇಟ್ ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಹಳೆ ಲೈನ್ ಬದಲಾವಣೆ ಮಾಡಿ ತಾವು ಹೊಸದಾಗಿ ಲೈನ್ ಹಾಕುವುದಕ್ಕೆ ಈಗಾಗಲೇ ಒಂದು ಯೋಜನೆ ಬಂದಿದೆ. ಅದಕ್ಕೆ ತಾವು ಒಪ್ಪಬೇಕು. ಮತ್ತು ಇದರ ಬಗ್ಗೆ ಮಂಡಲಿಯವರನ್ನು ಕರೆದು ಒಂದು ಸಭೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ವಿ. ಮುನಿಯಪ್ಪ : ಸಾಧ್ಯವಾದರೆ ಸೋಮವಾರ ಐದನೇ ತಾರೀಖು 4ಗಂಟೆಗೆ ಮಂಡಲಿ ಅಧಿಕಾರಿಗಳನ್ನು ಕರೆದು ಸಮಸ್ಯೆ ಏನು ಇದೆ. ತಾವು ಸಹ ಬಂದರೆ ಕುಳಿತು ಚರ್ಚೆ ಮಾಡಿ ಪರಿಹಾರವನ್ನು ಏನು ಕಂಡು ಹಿಡಿಯಬೇಕು ಅದನ್ನು ಕಂಡು ಹಿಡಿಯೋಣ.

ಶ್ರೀ ವಾಟಾಳ್ ನಾಗರಾಜ್ : ಬಹಳ ಮುಖ್ಯವಾಗಿ 10 ಗಂಟೆ ವಿದ್ಯುಚ್ಛಕ್ತಿ ನಿಲ್ಲುತ್ತದೆ. ಸುಮಾರು ಒಂದು ತಿಂಗಳಿಂದ ಇದೇ ಪರಿಸ್ಥಿತಿ ಇದೆ. ಪ್ರತಿ ದಿನ 10 ಗಂಟೆ ಕಗ್ಗತ್ತಲೆ ಆಗಿದೆ. ಅದರ ಬಗ್ಗೆ ನೀವು ತೀವ್ರ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ವಿ. ಮುನಿಯಪ್ಪ : ಆ ದೃಷ್ಟಿಯಿಂದಲೇ ಈಗ ಹೇಳಿದಂತೆ ಎಲ್ಲಾಅಭಿವೃದ್ಧಿ ಕೆಲಸಗಳನ್ನು ಕೈಗೊಂಡರೆ ಖಂಡಿತವಾಗಿ ಸುಧಾರಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಸೋಮವಾರ ನಾಲ್ಕು ಗಂಟೆಗೆ ತಾವು ಸಭೆ ಕರೆದಿದ್ದೀರಾ?

ಶ್ರೀ ವಿ. ಮುನಿಯಪ್ಪ : ಸೋಮವಾರ ಸಂಬಂಧಪಟ್ಟ ಅಧಿಕಾರಿಗಳ ಸಭೆಯನ್ನು ನಾಲ್ಕು ಗಂಟೆಗೆ ಕರೆಯೋಣ ತಮ್ಮನ್ನೂ ಸಹ ಕರೆಯುತ್ತೇನೆ.

ಶಾಸನ ರಚಾನಾ ಕಾರ್ಯ ಕಲಾಪಗಳು

1994ರ ಕರ್ನಾಡಕ ರಾಜ್ಯ ಅಲ್ಪಸಂಖ್ಯಾಂತರ ಆಯೋಗ ವಿಧೇಯಕ (ಮಂಡನೆಗೆ ಅನುಮತಿ ಕೋರಿಕೆ)